ಪಿ ಡಬ್ಲು 1

ಸಾಕ್ಷಿಯನ್ನು ಕರೆಸಿ ಪ್ರಮಾಣಿಕರೀಸಲಾಯಿತು.

ದಿನಾಂಕಃ 12-11-2021

**ಪಾಟೀಸವಾಲುಃ** 14 ಹಾಗೂ 16 ನೇ ಪ್ರತಿವಾದಿಗಳ ಪರ ಶ್ರೀ ಎಸ್.ಎಮ್.ಎನ್. ವಕೀಲರಿಂದ,

ಈರ ಯಾನೆ ಬೋಳ ವೆಂಕಟರಮಣ ನಾಯ್ಕು ನಮ್ಮ ಮುತ್ತಜ್ಜ ಎಂದರೆ ನಿಜ . ನಮ್ಮ ಮುತ್ತಜ್ಜನಿಗೆ ಸೋಮಯ್ಯು ಹಾಗೂ ದುರ್ಗಪ್ಪ ಎನ್ನುವ ಇಬ್ಬರು ಗಂಡು ಮಕ್ಕಳು ಇದ್ದರು. ನಮ್ಮ ಮುತ್ತಜ್ಜನಿಗೆ ಇಬ್ಬರು ಹೆಣ್ಣು ಮಕ್ಕಳು ಇದ್ದರು ಎಂದು ಹೇಳುತ್ತಾರೆ ಆದರೆ ಅವರ ಬಗ್ಗೆ ನನಗೆ ಗೊತ್ತಿಲ್ಲ. ಈಗ ಆ ಇಬ್ಬರು ಹೆಣ್ಣು ಮಕ್ಕಳು ತೀರಿಕೊಂಡಿರುತ್ತಾರೆ. ಒಬ್ಬ ಹೆಣ್ಣು ಮಗಳನ್ನು ಭಟ್ಕಳ ತಾಲೂಕು ಕಾಯ್ಕಿಣಿಗೆ ಮದುವೆ ಮಾಡಿಕೊಡಲಾಯಿತು . ಆದರೆ ಅವರ ಹೆಸರು ನನಗೆ ಗೊತ್ತಿಲ್ಲ. ಕಾಯ್ಕಿಣಿಗೆ ಕೊಟ್ಟ ನಮ್ಮ ಮುತ್ತಜ್ಜನ ಮಗಳಿಗೆ ಮಕ್ಕಳು ಇದ್ದು ಅವರು ಕಾಯ್ಕಿಣಿಯಲ್ಲಿ ಈಗ ಇರುತ್ತಾರೆ . ನಮ್ಮ ಮುತ್ತಜ್ಜನ ಇನ್ನೊಬ್ಬ ಮಗಳನ್ನು ಎಲ್ಲಿಗೆ ಮದುವೆ ಮಾಡಿಕೊಡಲಾಗಿದೆ ಎಂದು ಹಾಗೂ ಅವರ ಹೆಸರು ನನಗೆ ಗೊತ್ತಿಲ್ಲ. ಸದ್ರಿಯವರಿಗೆ ಮಕ್ಕಳು ಇರುತ್ತಾರೆಯೇ ಎಂದರೆ ಇರಬಹುದು . ನಮ್ಮ ಮುತ್ತಜ್ಜನ ಇಬ್ಬರು ಹೆಣ್ಣು ಮಕ್ಕಳನ್ನು ಇಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ದಾವಾ ಅ ಶೆಡ್ಯೂಲ್ ಆಸ್ತಿ ಸೋಮಯ್ಯು ಹಾಗೂ ದುರ್ಗಪ್ಪನಿಗೆ ಅವರ ಪೂರ್ವಜರಿಂದ ಬಂದಿರುತ್ತದೆ. ಬ ಮತ್ತು ಕ ಶೆಡ್ಯೂಲ್ ಆಸ್ತಿಗಳು ನಮ್ಮ ಮುತ್ತಜ್ಜ ಈರನಿಗೆ ಭೂನ್ಯಾಯ ಮಂಡಳಿಯಿಂದ ಮಂಜೂರಾಗಿದ್ದವು. ದಾವಾ ಅ ಶೆಡ್ಯೂಲ್ ಆಸ್ತಿ ನಮ್ಮ ಮುತ್ತಜ್ಜ ಈರನ ಹೆಸರಿಗೆ ಭೂನ್ಯಾಯ ಮಂಡಳಿಯಲ್ಲಿ ಮಂಜೂರಾಗಿರುವುದಿಲ್ಲ. ನಮ್ಮ ಅಜ್ಜ ದಾವಾ ಅ ಶೆಡ್ಯೂಲ್ ಆಸ್ತಿಯನ್ನು ಮಂಜೂರಿ ಮಾಡಲು ಕೋರಿ ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿದ್ದರು. ನಮ್ಮ ಮುತ್ತಜ್ಜನಿಗೆ ಸದ್ರಿ ಅರ್ಜಿ ಮೇರೆಗೆ ದಾವಾ ಅ ಶೆಡ್ಯೂಲ್ ಆಸ್ತಿ ಮಂಜೂರಿಯಾಗಿರುವುದಿಲ್ಲ . ದಾವಾ ಅ ಶೆಡ್ಯೂಲ್ ಆಸ್ತಿ ಸೋಮಯ್ಯು ಹಾಗೂ ದುರ್ಗಪ್ಪನಿಗೆ ಸಾಮ್ಯಾಕವಾಗಿ ಮಂಜೂರಾಗಿರುತ್ತದೆ . ದಾವಾ ಅ ಶೆಡ್ಯೂಲ್ ಆಸ್ತಿ ಸೋಮಯ್ಯು ಹಾಗೂ ದುರ್ಗಪ್ಪನ ಸ್ವಯಾರ್ಜಿತ ಆಸ್ತಿಗಳು ಆಗಿದ್ದರಿಂದ ಅವರ ಹೆಸರಿಗೆ ಆ ಹೆಸರಿಗೆ ಆ ಆಸ್ತಿ ಮಂಜೂರಾಗಿದ್ದು ನಮ್ಮ ಮುತ್ತಜ್ಜ ಈರನಿಗೆ ಮಂಜೂರಾಗಿರುವುದಿಲ್ಲ ಎಂದರೆ ಸರಿಯಲ್ಲ .

ಸೋಮಯ್ಯನ ಜೀವಿತಾವಧಿಯಲ್ಲಿ ದುರ್ಗಪ್ಪನ ವಾರಸುದಾರರಾದ 5 ರಿಂದ 10 ನೇ ಪ್ರತಿವಾದಿಗಳು ದಾವಾ ಅ ಶೆಡ್ಯೂಲ್ ಆಸ್ತಿಯಲ್ಲಿ 36 ಗುಂಟೆಯನ್ನು 1 ನೇ ಪ್ರತಿವಾದಿಗೆ ನೋಂದಾಯಿತ ದಾನ ಪತ್ರದ ಮೂಲಕ ಕೊಟ್ಟಿದ್ದರು ಎಂದರೆ ನಿಜ . ಸೋಮಯ್ಯನ ಜೀವಿತಾವಧಿಯಲ್ಲಿ ದಾವಾ ಅ ಶೆಡ್ಯೂಲ ಆಸ್ತಿಯಲ್ಲಿ ಉಳಿದ 36 ಗುಂಟೆಯನ್ನು ದುರ್ಗಪ್ಪನ ವಾರಸುದಾರರಾದ 5 ರಿಂದ 10 ಪ್ರತಿವಾದಿಗಳು 12 ನೇ ಪ್ರತಿವಾದಿಗೆ ನೋಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ನಿಜ . ನೋಂದಾಯಿತ ದಾನ ಪತ್ರ ಹಾಗೂ ನೋಂದಾಯಿತ ಕ್ರಯ ಪತ್ರದ ಬಗ್ಗೆ ಗೊತ್ತಿದೆ . ಸಾಕ್ಷಿಯು ಮುಂದುವರಿದು 2015-16 ರಲ್ಲಿ ದಾಖಲೆ ತೆಗೆದು ನೋಡಿದಾಗ ಆ ರೀತಿ ನೊಂದಾಯಿತ ದಾನ ಪತ್ರ ಹಾಗೂ ಕ್ರಯ ಪತ್ರದ ಮೂಲಕ ಕೊಟ್ಟಿರುವ ವಿಷಯ ನಮಗೆ ಗೊತ್ತಾಗಿರುತ್ತದೆ. 2015-16 ರಲ್ಲಿ ನಾನು ನೋಡಿದ ಷದ್ರಿ ದಾಖಲೆಗಳನ್ನು ಇಲ್ಲಿ ಹಾಜರು ಮಾಡಿರುತ್ತೇನೆ. ಷದ್ರಿ ವಿಷಯ ಗೊತ್ತಾದ ತಕ್ಷಣ ಅವುಗಳನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ಕೇಸು ಹಾಕಿರುವುದಿಲ್ಲ . 11 ಹಾಗೂ 12 ನೇ ಪ್ರತಿವಾದಿಗಳು ನೋಂದಾಯಿತ ದಾನ ಪತ್ರ ಹಾಗೂ ಕ್ರಯ ಪತ್ರ ಪಡೆದ ನಂತರ ಪ್ರತ್ಯೇಕವಾಗಿ ದಾವಾ ಅ ಶೆಡ್ಯೂಲ್ ಆಸ್ತಿಯನ್ನು ಅವರು ಅನುಭವಿಸುತ್ತಾ ಬಂದಿರುತ್ತಾರೆ ಎಂದರೆ ನಿಜ . 11 ಹಾಗೂ 12 ನೇ ಪ್ರತಿವಾದಿಗಳು ದಾವಾ ಅ ಶೆಡ್ಯೂಲ್ ಆಸ್ತಿಯ ಸ್ವಾಧೀನ ಹೊಂದಿರುವುದನ್ನು ನಾವು ಅವರನ್ನು ಪ್ರಶ್ನಿಸಿರುತ್ತೇವೆ. ಅವರ ವಿರುದ್ಧ ನಾವು ಪೊಲೀಸರಿಗೆ ದೂರು ಕೊಟ್ಟಿಲ್ಲ. ನೊಂದಾಯಿತ ದಾನ ಪತ್ರ ಹಾಗೂ ನೊಂದಾಯಿತ ಕ್ರಯ ಪತ್ರ ಮಾಡಿಕೊಡುವ ಸಂದರ್ಭದಲ್ಲಿಯೇ ಅವುಗಳ ಬಗ್ಗೆ ನಮಗೆ ಗೊತ್ತಿದ್ದ ಕಾರಣದಿಂದ ನಾವು ಆ ಸಂದರ್ಭದಲ್ಲಿ ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ . ಸೋಮಯ್ಯ ನಮ್ಮ ಅಜ್ಜ ಇರುತ್ತಾನೆ. 12 ನೇ ಪ್ರತಿವಾದಿಯ ಪರಿಚಯ ನನಗೆ ಇರುವುದಿಲ್ಲ. 12 ನೇ ಪ್ರತಿವಾದಿಯ ಪರಿಚಯ ಇರುವುದಿಲ್ಲ ಎಂದು ನಾವು ದಾವೆಯಲ್ಲಿ ಹೇಳಿರುತ್ತೇವೆ . ಈ ದಾವೆಯನ್ನು ಸಲ್ಲಿಸುವಾಗ 12 ನೇ ಪ್ರತಿವಾದಿಯ ಬಗ್ಗೆ ವಿಚಾರಿಸಿ ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿರುತ್ತೇವೆ. ನನಗೆ 14 ಹಾಗೂ 16 ನೇ ಪ್ರತಿವಾದಿಯ ಪರಿಚಯ ಇರುವುದಿಲ್ಲ. 14 ಹಾಗೂ 16 ನೇ ಪ್ರತಿವಾದಿಗಳು 12 ನೇ ಪ್ರತಿವಾದಿಯಿಂದ ಕ್ರಮವಾಗಿ 8 ಹಾಗೂ 4 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ನಿಜ . 14 ಹಾಗೂ 16 ನೇ ಪ್ರತಿವಾದಿಗಳು ತಾವು ಕ್ರಯಕ್ಕೆ ಪಡೆದ ನಂತರ ತಮ್ಮ ಜಾಗಗಳಲ್ಲಿ ಈಗ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ . 2019-20 ರಲ್ಲಿ ನಾನು ದಾವಾ ಅ ಶೆಡ್ಯೂಲ್ ಆಸ್ತಿಯನ್ನು ನೋಡಿದ್ದೆನು. ನಮ್ಮ ಅಜ್ಜ ತನ್ನ ಜೀವಿತಾವಧಿಯಲ್ಲಿ ಮಾರಾಟ ಮಾಡಿರುವುದನ್ನು ಈಗ ನಮಗೆ ಪ್ರಶ್ನಿಸಲು ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅ ಶೆಡ್ಯೂಲ್ ಆಸ್ತಿ ನಮ್ಮ ಮುತ್ತಜ್ಜ ಈರನಿಗೆ ಸೇರಿರುವುದಿಲ್ಲ ಎಂದರೆ ಸರಿಯಲ್ಲ . ಸೋಮಯ್ಯ ಹಾಗೂ ದುರ್ಗಪ್ಪ ತಮ್ಮ ಕುಟುಂಬದ ಅವಶ್ಯಕತೆಗಾಗಿ ದಾವಾ

ಅ ಶೆಡ್ಯೂಲ್ ಆಸ್ತಿಯನ್ನು 12 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ . ದಾವಾ ಅ ಶೆಡ್ಯೂಲ್ ಆಸ್ತಿ ನಮ್ಮ ಪಿತ್ರಾರ್ಜಿತ ಆಸ್ತಿ ಆಗಿಲ್ಲದೇ ಇರುವುದರಿಂದ ಹಾಗೂ ಅದು ಸೋಮಯ್ಯ ಹಾಗೂ ದುರ್ಗಪ್ಪನ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ ಅದರಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ .

**ಪಾಟೀ ಸವಾಲುಃ 11 ನೇ ಪ್ರತಿವಾದಿ ಪರ ಶ್ರೀ ಎನ್ ಈ ಹೆಚ್ ವಕೀಲರಿಂದಃ**

ಮೇಲ್ಕಂಡ ಎಲ್ಲಾ ಪ್ರತಿವಾದಿಗಳ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆ ಇಲ್ಲ.

(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ